30ರಿಂದ 64ನೇ ಕಿ.ಮೀ.ವರೆಗಿನ ಕಾಮಗಾರಿಗಳಿಗೆ ಐಸಿಬಿ ಗುತ್ತಿಗೆದಾರರುಗಳನ್ನು ನಿಗದಿ ಪಡಿಸಲು ವಿಶ್ವ ಬ್ಯಾಂಕ್ ನಿಯಮಾವಳಿಗಳ ಪ್ರಕಾರ ಈಗಾಗಲೇ ಕ್ರಮ ತೆಗೆದು ಕೊಳ್ಳಲಾಗಿದೆ. ಡೀಸೆಲ್ ಕೊರತೆಯನ್ನು ನೀಗಿಸಲು ಇಲಾಖಾ ವತಿಯಿಂದಲೇ ಡೀಸೆಲ್ ಬಂಕ್‌ನ್ನು ತೆರೆಯಲಾಗಿದೆ. ಸಿಮೆಂಟ್ ಕೊರತೆಯನ್ನು ನೀಗಿಸಲೂ ಸಹ ಈಗಾಗಲೇ ಅವಶ್ಯ ಕ್ರಮ ತೆಗೆದುಕೊಳ್ಳಲಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯು ವಿಶ್ವ ಬ್ಯಾಂಕ್ ನೆರವಿನೊಡನೆ ಕಾರ್ಯಗತಗೊಳಿಸುತ್ತಿರುವುದರಿಂದ, ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಆದ್ಯತೆ ಮೇಲೆ ಹಣ ಬಿಡುಗಡೆ ಮಾಡಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, 12ನೇ ಪಟ್ಟಿಯಲ್ಲಿ ಇರುವ 107 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳನ್ನು ಹೊರತುಪಡಿಸಿ, ಉಳಿದ 77 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಕೆ.ಇ.ಬಿ. ಅವ್ಯವಹಾರದ ಬಗ್ಗೆ.

1062 - ಶ್ರೀ ಉಮಾಪತಿ (ಹೊಳಲ್ಕೆರೆ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಹೊಳಲ್ಕೆರೆ ವಿಭಾಗದಲ್ಲಿ ಕಳೆದ 3 ವರ್ಷಗಳಲ್ಲಿ ವಿದ್ಯುಚ್ಛಕ್ತಿ ಉಪಕರಣಗಳನ್ನು ಖರೀದಿಸುವಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಸರ್ಕಾರ ಸದರಿ ವಿದ್ಯುಚ್ಛಕ್ತಿ ಮಂಡಳಿಯ ಅಧಿಕಾರಿ, ನೌಕರರ ಬಗ್ಗೆ ಯಾವ ಕ್ರಮ ಕೈಗೊಳ್ಳಲಿದೆ?*

ಇ) *ಹಾಗಿದ್ದಲ್ಲಿ, ಈಗಲಾದರೂ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಎಸ್.ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಬಂದಿದೆ.

ಆ) 6 ಜನ ಅಧಿಕಾರಿಗಳ, ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸುವಂತೆ 21ನೇ ಜೂನ್ 1990ರಂದು ಆದೇಶ ನೀಡಿದೆ. ಇದಲ್ಲದೆ ಆಪಾದಿತರ ವಿರುದ್ಧ ಪೋಲೀಸಿಗೆ ಫಿರ್ಯಾದನ್ನು ಸಲ್ಲಿಸಲಾಗಿದೆ.

ಇ) 'ಆ' ನಲ್ಲಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ವಿಜಯನಗರ ಉಕ್ಕು ಕಾರ್ಖಾನೆ ಸ್ಥಾಪನೆ

1439 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಜಯನಗರ ಉಕ್ಕು ಕಾರ್ಖಾನೆ ಸ್ಥಾಪನೆಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಆ) *ವಿಜಯನಗರ ಉಕ್ಕು ಕಾರ್ಖಾನೆ ಕಾರ್ಯಾರಂಭ ಯಾವಾಗ ಆಗಲಿದೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ)

1. ವಿಜಯನಗರ ಉಕ್ಕು ಕಾರ್ಖಾನೆಯು ಜಂಟಿ ವಲಯದಲ್ಲಿ ರಾಜ್ಯ ಸರ್ಕಾರ, ಕರ್ನಾಟಕ ರಾಜ್ಯ ಕೈಗಾರಿಕಾ ಅಭಿವೃದ್ಧಿ ಮತ್ತು ಬಂಡವಾಳ ನಿಗಮ ನಿಯಮಿತದ

ಮುಖಾಂತರ ಹಾಗೂ ಮೆ:ಎಸ್ಸಾರ್ ಗುಜರಾತ್ ಲಿಮಿಟೆಡ್‌ರವರ ಸಹಯೋಗದೊಂದಿಗೆ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ.

2. ಕೆ.ಎಸ್.ಐ.ಡಿ.ಸಿ. ಮತ್ತು ಮೆ:ಎಸ್ಸಾರ ಗುಜರಾತ್ ಲಿಮಿಟೆಡ್‌ಗಳೆರಡೂ ಮೆನೊರಾಂಡಮ್ ಆಫ್ ಅಂಡರ್-ಸ್ಟಾಂಡಿಗೆ ಸಹಿ ಹಾಕಿವೆ.

3. ಸವಿವರವಾದ ಲೆಟರ್ ಆಫ್ ಇಂಟೆಂಟ್ ಅರ್ಜಿಯನ್ನು ಭಾರತ ಸರ್ಕಾರಕ್ಕೆ ದಿನಾಂಕ : 4.3.91 ರಂದು ಸಲ್ಲಿಸಲಾಗಿದೆ.

ಆ) ವಿಜಯನಗರ ಉಕ್ಕು ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಕ್ರಮಗಳು ಮುಕ್ತಾಯಗೊಂಡ ನಂತರ 36 ತಿಂಗಳುಗಳೊಳಗೆ ಉತ್ಪಾದನೆ ಪ್ರಾರಂಭಗೊಳ್ಳುವ ನಿರೀಕ್ಷೆ ಇದೆ.

ಬೆಂಗಳೂರಿನ ರೇಸ್‌ಕೋರ್ಸ್ ಸ್ಥಳಾಂತರ

1440 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ಮಧ್ಯದಲ್ಲಿರುವ ಕುದುರೆ ಜೂಜಿನ ಮೈದಾನವನ್ನು ಬೇರೆಡೆಗೆ ಸ್ಥಳಾಂತರಿಸುವ ಬಗ್ಗೆ ಸರ್ಕಾರ ನಿರ್ಧಾರ ಕೈಗೊಂಡಿದೆಯೇ?

ಆ) ಹಾಗಿದ್ದಲ್ಲಿ, ಇದನ್ನು ಯಾವಾಗ ಸ್ಥಳಾಂತರಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಸರ್ಕಾರ 1987ರಲ್ಲಿ ರೇಸ್‌ಕೋರ್ಸ್‌ನ್ನು ಸ್ಥಳಾಂತರಿಸಲು ತೀರ್ಮಾನಿಸಿದೆ.

ಆ) ಈ ವಿಷಯವು ಪರಿಶೀಲನೆಯಲ್ಲಿದೆ.

ಗ್ರಾನೈಟ್ ಕಲ್ಲು ತೆಗೆಯುವುದನ್ನು ರಾಷ್ಟ್ರೀಕರಣ

1495 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿಸರ್ಗ ಸಂಪತ್ತನ್ನು ಉಳಿಸಲು ಗ್ರಾನೈಟ್ ಕಲ್ಲುಗಳ ಲೂಟಿ ತಪ್ಪಿಸಲು ಗ್ರಾನೈಟ್ ತೆಗೆಯುವುದನ್ನು ರಾಜ್ಯಾದ್ಯಂತ ರಾಷ್ಟ್ರೀಕರಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಆ) ಗ್ರಾನೈಟ್ ತೆಗೆಯುವುದರಿಂದ ನಿಸರ್ಗ ಸಂಪತ್ತು ಪರಿಸರ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಖಾಸಗಿಯವರು ಗ್ರಾನೈಟ್ ತೆಗೆಯುವುದರಿಂದ ಸರ್ಕಾರಕ್ಕೆ ಪ್ರತಿದಿನ ಎರಡು ಕೋಟಿ ರೂಪಾಯಿ ನಷ್ಟವಾಗುತ್ತಿರುವುದು ಗೊತ್ತಿಲ್ಲವೆ?

ಈ) ಕರ್ನಾಟಕದಲ್ಲಿ ಗ್ರಾನೈಟ್ ತೆಗೆಯುವ ಗಣಿಗಳು ಎಷ್ಟಿವೆ ಹಾಗೂ ಇವು ಎಲ್ಲಿ ಇವೆ? (ಗ್ರಾನೈಟ್ ಇರುವ ಪ್ರದೇಶಗಳ ವಿವರಗಳನ್ನು ಕೊಡುವುದು).

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) ಇಲ್ಲ

ಈ) ರಾಜ್ಯದಲ್ಲಿ ಬಣ್ಣಗಳ ಗ್ರಾನೈಟ್‌ಗಾಗಿ 52 ಕಲ್ಲುಗಣಿ ಗುತ್ತಿಗೆಗಳು ಇರುತ್ತವೆ. ವಿವರಗಳನ್ನು ಪಟ್ಟಿ 1 ಮತ್ತು 2 ರಲ್ಲಿ ನೀಡಿದೆ.

ರಾಜ್ಯದಲ್ಲಿ ಗ್ರಾನೈಟ್ ಇರುವ ಪ್ರದೇಶಗಳನ್ನು ಪಟ್ಟಿ - 3 ರಲ್ಲಿ ನೀಡಿದೆ.